

# ದಂಡಂ ದಶಗುಣಂ

## ಬಿಸಿ ಬಿಸಿ ಕಜ್ಜಾಯಗಳ ರುಚಿಕರ ನೆನಪುಗಳು

■ ಡಾ. ನಾಗರಾಜು ಜಿ.ಬಿ., ಭೈರೇನಹಳ್ಳಿ

ನಾವು ಇತ್ತೀಚೆಗೆ ಇಂಗ್ಲೆಂಡಿಗೆ ಪ್ರವಾಸ ಹೋಗಿದ್ದಾಗ ಅಲ್ಲಿ ನಮ್ಮ ಭಾಮೈದುನನ ಮನೆಯಲ್ಲಿದ್ದೆವು. ಅಲ್ಲಿ ಏಳು ವರ್ಷದ ನಮ್ಮ ಮಗ ಮಾಮೂಲಿನಂತೆ ಏನೋ ತರಲೆ ಮಾಡಿದ ಎಂದು ಸಿಟ್ಟಾದ ನನ್ನ ಹೆಂಡತಿ ಅವನಿಗೆ ಹೊಡೆಯಲು ಕೈ ಎತ್ತಿದಳು. ನನ್ನ ಬಾಮೈದ ನಗುತ್ತಾ 'ಇಲ್ಲಿ ಮಕ್ಕಳನ್ನು ಪೋಷಕರಾಗಲೀ ಶಿಕ್ಷಕರಾಗಲೀ ಹೊಡೆಯುವುದು ನಿಷಿದ್ಧ. ಅಕಸ್ಮಾತ್ ಹೊಡೆದ ವಿಷಯ ಪೊಲೀಸರಿಗೇನಾದರೂ ತಲುಪಿದರೆ ನೀವು ಜೈಲು ಪಾಲಾಗುವುದು ಗ್ಯಾರಂಟಿ' ಎಂದ. ಜೈಲು ಎಂದಾಕ್ಷಣ ನನ್ನ ಹೆಂಡತಿ ಎತ್ತಿದ ಕೈಯನ್ನು ನಿಧಾನವಾಗಿ ಇಳಿಸಿದಳು. ನಮ್ಮ ಮಕ್ಕಳನ್ನು ನಾವು ಹೊಡೆದರೆ ಜೈಲೆ? ಮಕ್ಕಳು ತಪ್ಪು ಮಾಡಿದಾಗ ಎರಡೇಟು ಬಿಗಿಯುವುದು ಪೋಷಕರ ಮತ್ತು ಶಿಕ್ಷಕರ ಜನ್ಮಸಿದ್ಧ ಹಕ್ಕು ಎಂದು ನಂಬಿರುವ ದೇಶದಿಂದ ಬಂದ ನಮಗೆ ಇದನ್ನು ಅರಗಿಸಿಕೊಳ್ಳುವುದು ಕಷ್ಟವಾಯಿತು.

ನಾವು ಶಾಲೆಗೆ ಹೋಗುತ್ತಿದ್ದಾಗ ಶಿಕ್ಷಕರಿಂದ ಮತ್ತು ಮನೆಯಲ್ಲಿ ತಿಂದ ಅಸಂಖ್ಯಾತ ಬಿಸಿಬಿಸಿ ಕಜ್ಜಾಯಗಳು ನೆನಪಾಗಿ, ಆಗ ಇಂತಹ ಒಂದು ಕಾನೂನು ನಮ್ಮನ್ನು ರಕ್ಷಿಸಲು ಇರಲಿಲ್ಲವಲ್ಲ ಎಂದು ಹೊಟ್ಟೆ ಉರಿಯಿತು. ಅಲ್ಲಿದ್ದಾಗ ಗೊತ್ತಾದ ಮತ್ತಷ್ಟು ವಿಷಯಗಳೇನೆಂದರೆ – ಶಾಲೆಯವರು ಆಗಾಗ್ಗೆ ಮಕ್ಕಳ ಹತ್ತಿರ ಆತ್ಮೀಯತೆಯಿಂದ ಮಾತನಾಡಿ, ಅವರ ಮೇಲೆ ಮನೆಯಲ್ಲಿ ಹಲ್ಲೆ, ದೌರ್ಜನ್ಯಗಳೇನಾದರೂ ಆಗುತ್ತಿವೆಯೇ ಎಂಬುದನ್ನು